# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** **ದಿನಾಂಕ: 01.01.2020**

## ವಿಶೇಷ ಆಯುಕ್ತರು(ಘನತ್ಯಾಜ್ಯ) ಅವರ ನೇತೃತ್ವದಲ್ಲಿ ಕಸ ಹುಡುಕುವ ಸ್ಪರ್ಧೆ:



ಹೊಸವರ್ಷ ಆಚರಣೆ ಮಾಡಿದ ಪ್ರಮುಖ ಸ್ಥಳಗಳಾದ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ರೆಸಿಡೆನ್ಸಿ ರಸ್ತೆ ಹಾಗೂ ಚರ್ಚ್ ಸ್ಟ್ರೀಟ್ ರಸ್ತೆಯಲ್ಲಿ ದಿ ಅಗ್ಲಿ ಇಂಡಿಯನ್ ಸಂಸ್ಥೆಯು "TrashUre Hunt" ಶೀರ್ಷಿಕೆಯಡಿ ಸಾರ್ವಜನಿಕರು ಬೆಳಗ್ಗೆ 10 ರಿಂದ 11 ಗಂಟೆಯವರೆಗೆ ಕಸ ಹುಡುಕುವ ಸ್ಪರ್ಧೆಯನ್ನು ಆಯೋಜಿಸಿತ್ತು. ಸ್ಪರ್ಧೆಯಲ್ಲಿ ಹೆಚ್ಚು ಕಸ ಹುಡುಕಿದವರಿಗೆ ಬಹುಮಾನ ವಿತರಿಸಲಾಗುವುದು ಎಂದು ತಿಳಿಸಿತ್ತು.

ಅದರಂತೆ 3 ಕಿ.ಮೀ ಅಂತರದ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ರೆಸಿಡೆನ್ಸಿ ರಸ್ತೆ ಹಾಗೂ ಚರ್ಚ್ ಸ್ಟ್ರೀಟ್ ರಸ್ತೆಗಳಲ್ಲಿ ಬೆಳಗ್ಗೆ 10 ರಿಂದ 11 ಗಂಟೆಯವರೆಗೆ ಕಸ ಹುಡುಕುವ ಸ್ಪರ್ಧೆಯಲ್ಲಿ ಚಿಕ್ಕ ಮಕ್ಕಳು ಸೇರಿದಂತೆ 40 ಮಂದಿ ಭಾಗವಹಿಸಿ, ಅಗ್ಲಿ ಇಂಡಿಯನ್ ಸಂಸ್ಥೆ ನೀಡಿದ್ದ ವ್ಯಾಟ್ಸಪ್ ಸಂಖ್ಯೆಗೆ ಭಾವಚಿತ್ರದ ಸಮೇತ ಕಸ ಬಿದ್ದಿರುವ ಫೋಟೊ ತೆಗೆದು ಕಳುಹಿಸಲು ಸೂಚನೆ ನೀಡಲಾಗಿತ್ತು. ಅದರಂತೆ ಸ್ಪರ್ಧಿಸಿದ್ದ ಅಷ್ಟೂ ಮಂದಿ 3 ಕಿ.ಮೀ ವ್ಯಾಪ್ತಿಯಲ್ಲಿ ಕಸ ಬಿದ್ದಿರುವ ಫೋಟೊಗಳನ್ನು ತೆಗೆದು 11 ಗಂಟೆಗೆ ಚರ್ಚ್ ಸ್ಟ್ರೀಟ್ ಮೆಟ್ರೊ ನಿಲ್ದಾಣದ ಬಳಿ ನಿಗದಿಪಡಿಸಿದ್ದ ಸ್ಥಳಕ್ಕೆ ಹಿಂತಿರುಗಿದರು. ಸ್ಪರ್ಧಿಗಳು ಗುರುತಿಸಿದ ಕಸದ ಭಾವಚಿತ್ರಗಳನ್ನು ಪರಿಗಣಿಸಿ, ರೋಹನ್, ನಿವೇದಿತ, ತನ್ವಿ ಹಾಗೂ ಸುಚಿತ್ ಎಂಬುವವರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಹೊಸವರ್ಷ ಆಚರಣೆ ಮುಗಿದ ಬಳಿಕ ಮುಂಜಾನೆ 3 ಗಂಟೆಗೆ ಪೌರಕಾರ್ಮಿಕರ ತಂಡವು ಆರೋಗ್ಯಾಧಿಕಾರಿ ನೇತೃತ್ವದಲ್ಲಿ 10 ಟನ್ ಕಸ(1 ಕಾಂಪ್ಯಾಕ್ಟರ್)ವನ್ನು ತೆರವುಗೊಳಿಸಿರುವ ಪರಿಣಾಮ ಎಲ್ಲೂ ಕಸ ಕಂಡುಬಂದಿಲ್ಲ. ಕಸ ಸಂಗ್ರಹ ಮಾಡಿದ ಬಳಿಕ ಸಾರ್ವಜನಿಕರು ಬಿಸಾಡಿರುವ 8 ಕೆ.ಜಿ ಕಸವನ್ನು ಮಾತ್ರ ಸ್ಪರ್ಧಿಗಳು ಹುಡುಕಿದ್ದಾರೆ.

ಪೌರಾರ್ಮಿಕರ ತಂಡವು ಮುಂಜಾನೆಯೆ ಬಂದು ಕಸ ಸಂಗ್ರಹಿಸಿ ಎಲ್ಲೂ ಕಸವಿಲ್ಲದಂತೆ ಮಾಡಿದ್ದಾರೆ. ಈ ಪರಿಣಾಮ ಪೌರಕಾರ್ಮಿಕ ತಂಡಕ್ಕೆ ಬಹುಮಾನ ವಿತರಣೆ ಮಾಡಿ ಅವರ ಕಾರ್ಯಕ್ಕೆ ಅಭಿನಂದನೆ ವ್ಯಕ್ತಪಡಿಸಲಾಯಿತು.

**ದಿ ಅಗ್ಲಿ ಇಂಡಿಯನ್ ಆಯೋಜಿಸಿದ್ದ ಸ್ಪರ್ಧೆ ಕುರಿತು ಸುದ್ದಿಗಾರರೊಂದಿಗೆ ವಿಶೇಷ ಆಯುಕ್ತರು(ಘನತ್ಯಾಜ್ಯ) ಡಿ.ರಂದೀಪ್ ರವರು ಮಾತನಾಡಿ,** ಹೊಸ ವರ್ಷಕ್ಕೂ ಮೊದಲ ದಿನ ವರ್ಷಾಚರಣೆ ಆಚರಣೆ ಮಾಡುಲು ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ರೆಸಿಡೆನ್ಸಿ ರಸ್ತೆ ಹಾಗೂ ಚರ್ಚ್ ಸ್ಟ್ರೀಟ್ ರಸ್ತೆಗಳಲ್ಲಿ 3,000ಕ್ಕೂ ಹೆಚ್ಚು ಮಂದಿ ಸೇರುತ್ತಾರೆ. ಈ ವೇಳೆ ಸಾಮಾನ್ಯವಾಗಿ ಹೆಚ್ಚು ಕಸ ಉತ್ಪತ್ತಿ ಆಗುತ್ತದೆ. ಅದನ್ನು ಪಾಲಿಕೆ ಪೌರಕಾರ್ಮಿಕರ ತಂಡವು ಮುಂಜಾನೆ 3 ಗಂಟೆಗೆ ಬಂದು 10 ಟನ್ ತ್ಯಾಜ್ಯವನ್ನು ಸಂಗ್ರಹಿಸಿ ಕಾಂಪ್ಯಾಕ್ಟರ್ ಮೂಲಕ ವಿಲೇವಾರಿ ಮಾಡಲಾಗಿದೆ ಎಂದರು.

ನಗರದ ನಾಗರೀಕರಲ್ಲಿ ಕಸ ವಿಲೇವಾರಿ ಮಾಡುವ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ದಿ ಅಗ್ಲಿ ಇಂಡಿಯನ್ ಸಂಸ್ಥೆ ಕಸ ಹುಡುಕುವ ಸ್ಪರ್ಧೆಯನ್ನು ಏರ್ಪಡಿಸಿತ್ತು. ಇದಕ್ಕೆ ಪಾಲಿಕೆಯಿಂದ ಯಾವುದೇ ಹಣ ವ್ಯಯಿಸಿಲ್ಲ. ಆ ಸಂಸ್ಥೆಯೆ ಬಹುಮಾನ ವಿತರಿಸಿದೆ. ನಗರದ ನಾಗರೀಕರು ಕಸವನ್ನು ಎಲ್ಲೆಂದರಲ್ಲಿ ಬಿಸಾಡುವ ಬದಲು ಅವರ ಜವಾಬ್ದಾರಿಯನ್ನು ಅರಿತು ಕಸದ ಡಬ್ಬಿಗಳಲ್ಲಿ ಹಾಕುವ ಮೂಲಕ ನಗರದ ಸ್ವಚ್ಛತೆಯನ್ನು ಕಾಪಾಡಬೇಕು ಎಂದು ಮನವಿ ಮಾಡಿದರು.

ನಗರದಲ್ಲಿ ಒಮ್ಮೆ ಬಳಸುವ ಪ್ಲಾಸ್ಟಿಕ್, ಕಸ ವಿಂಗಡಣೆ ಹಾಗೂ ಕಸ ಸಂಸ್ಕರಣೆ ಮಾಡುವುದನ್ನು ನಾಗರೀಕರು ಅಳವಡಿಸಿಕೊಳ್ಳಲು ಮನವಿ ಮಾಡುತ್ತೇನೆ. ಅದನ್ನು ಎಲ್ಲರೂ ಸರಿಯಾಗಿ ಪಾಲನೆ ಮಾಡಿದರೆ ಸ್ವಚ್ಛ ಸರ್ವೇಕ್ಷಣ್ ಅಭಿಯಾನದಲ್ಲಿ ಉತ್ತಮ ಅಂಕ ಪಡೆಯಲು ಸಾಧ್ಯವಾಗುತ್ತದೆ. ಅದಕ್ಕೆ ನಾಗರೀಕರು ಸಹಕರಿಸಬೇಕೆಂದು ಕೋರಿದರು. ಕಸ ವಿಲೇವಾರಿ ಮಾಡುವ ಸಲುವಾಗಿ ಮುಂದಿನ ದಿನಗಳಲ್ಲಿ ಈ ರೀತಿಯ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಎಲ್ಲೂ ಕಸ ಇರದಂತೆ ಸ್ವಚ್ಛಗೊಳಿಸಿದ ಪೌರಕಾರ್ಮಿಕರ ತಂಡಕ್ಕೆ ಶ್ಲಾಘನೀಯ ವ್ಯಕ್ತಪಡಿಸುತ್ತೇನೆ ಎಂದು ತಿಳಿಸಿದರು.

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**